ಅಗರಿ ಶ್ರೀನಿವಾಸ ಭಾಗವತ ಸಂಸ್ಮರಣ ಪ್ರಸಂಗ ಮಾಲಿಕೆ

(2007)

ಪ್ರಕಾಶಕರು

ಕನ್ನಡ ಸಾಹಿತ್ಯ ಪರಿಷತ್, ಮಹಾರಾಷ್ಟ್ರ ಘಟಕ

Collection of Yakshagana Prasangas written by Late Agari Shrinivasa Bhagawath Collected and edited by HBL Rao and P. Shrinivas Bhat, Published on the eve of Literary and Cultural Festival of Kannadigas of Maharastra State - 2007

Pages : ೪೪ + 323

First Impression - 2007

Copy Right - Reserved

Price - Rs. 150/-

Published by : Kannada Sahitya Parishat Maharastra Ghataka
Manushruti, C.42/2/2
Sector 29, Vashi,
Navi Mumbai - 400 703

Printed at : Diganta Mudrana Ltd Yeyyadi,
Mangalore - 575 008

D.T.P : Modern Computers,
Pioneer Complex,
Mangalore - 575 001

ಅಗರಿ ಶ್ರೀನಿವಾಸ ಭಾಗವತರು ರಚಿಸಿದ ಪ್ರಸಂಗಗಳು

೧. ದೇವೀ ಮಹಾತ್ಮೆ 1

೨. ಬ್ರಹ್ಮಕಪಾಲ 31

೩. ಶಿವಲೀಲಾರ್ಪಣ 46

೪. ಅಂಧಕಾಸುರ ವಧೆ 57

೫. ಪ್ರಭಾವತಿ ಪರಿಣಯ 71

೬. ಧನಗುಪ್ತ ಮಹಾಬಲಿ 91

೭. ಭಗವಾನ್ ಏಸುಕ್ರಿಸ್ತ 113

೮. ನಾರಾಯಣ ಗುರು ಮಹಾತ್ಮೆ 135

೯. ಬಪ್ಪನಾಡು ಕ್ಷೇತ್ರ ಮಹಾತ್ಮೆ 150

೧೦. ಮಹಾದೇವಿ ಲಲಿತೋಪಾಖ್ಯಾನ 172

೧೧. ವೆಂಕಟೇಶ ಮಹಾತ್ಮೆ 204

೧೨. ಭರತೇಶ ವೈಭವ 226

೧೩. ಶ್ರೀದೇವಿ ಭ್ರಮರಾಂಬಿಕಾ ವಿಲಾಸ 254

೧೪. ಭಸ್ಮಾಸುರ ಮೋಹಿನಿ 280

೧೫. ಸುಂದೋಪಸುಂದರ ಕಾಳಗ 286

೧೬. ಸಿರಿ ಮಹಾತ್ಮೆ 294

೧೭. ಇತರ ಪದ್ಯಗಳು 318

ಅಂಧಕಾಸುರ ವಧೆ

ಪಾತ್ರ ಪರಿಚಯ

1. ಅಂಧಕಾಸುರ
2. ಗಿರಿಜೆ
3. ಈಶ್ವರ
4. ಗೂಢಚಾರಕ
5. ದೇವೇಂದ್ರ
6. ಶಚಿ
7. ಬ್ರಹ್ಮ
8. ಶ್ರೀಹರಿ
9. ಬಾಗಿಲಭಟರು
10. ನಾರದ

Generated by CamScanner from intsig.com

ಅಂಧಕಾಸುರ ವಧೆ

ಸೌರಾಷ್ಟ್ರ : ತ್ರಿವುಡೆ

ಇಂದುವಂಶಲಲಾಮ ಕೇಳು ಮು| ನೀಂದ್ರ ಕಾಶ್ಯಪನಣುಗನಾಗಿಹ | ಅಂಧಕಾಸುರನೆಂಬ ದೈತ್ಯ ಮ | ದಾಂಧನಾಗಿ || ೧ || ಶೋಣಿತಾಪುರವಾಳುತಿದ್ದನು | ದಾನವರ ನೆರಹಿಸುತ ಶೌರ್ಯದಿ | ಕಾಣೆನಾತನ ಸಮಬಲರ ನೀ | ಕ್ಷೋಣಿಯೊಳಗೆ || ೨ || ಅನಲನುದ್ಯಾನದ ತೆರೆದೊಳಾ | ತನ ಪುರವನೊಳ ಪೊಗುವಡಸದಳ | ಅನಿಮಿಷರಿಗೀ ತೆರದಿ ಮೆರೆದಿರೆ | ಘನ ಸಿರಿಯಲಿ || ೩ ||

ಕಾಂಬೋದಿ : ಝಂಪೆ

ದೈತ್ಯಪತಿಯೊಂದು ದಿನ | ಚಿತ್ತದಲಿ ಯೋಚಿಸಿದ | ಕೃತ್ತಿವಾಸನ ತಪವ ಗೈದು || ಉತ್ತಮದ ವರ ಪಡೆದು | ಸತ್ಯದಿಂ ತ್ರಿಜಗಾಧಿ | ಪತ್ಯವನು ಸಾಧಿಸುವೆನೆಂದು || ೧ || ಬಂದು ರೇವಾನದಿಯೊಳ್ | ಮಿಂದು ಸುಸ್ಥಳದೊಳಗೆ | ನಿಂದು ಧೃಡಮನದಿ ತಪವೆಸಗೆ || ಬಂಧಿಸುತ ಶ್ವಾಸವನು | ಸಂದವು ಹಲವು ಕಾಲ | ಬೆಂದುದೈ ತ್ರಿಜಗ ತಪದುರಿಗೆ || ೨ | ತಲ್ಲಣಿಸೆ ತಪದುರಿಯೊ | ಳೆಲ್ಲ ತ್ರಿದಶರು ನಾಕ | ದಲ್ಲಿ ಗಿರಿಜಾತೆ ಕೌತುಕದಿ || ವಲ್ಲಭನ ಪದಕೆರಗಿ | ತಲ್ಲಣವ ಗೊಳುತ ಭರ | ದಲ್ಲಿ ಬೆಸಗೊಂಡಳೀ ತೆರದಿ || ೩ ||

ಕೇದಾರಗೌಳ : ಅಷ್ಟ

ಪ್ರಾಣನಾಯಕ ದೇವ | ಏಣಾಂಕಧರನೆ ಇ | ದೇನಿನಿತಾಲಸ್ಯವು | ದಾನವನಂಧಕ | ಕ್ಷೋಣಿಯೊಳ್ ತಪಗೈವ | ಏನೆಂಬೆನದ್ಭುತವು || ೧ || ಧೃಡ ಮನದಿಂದೆಡೆ | ಬಿಡದೆ | ಗೈಯುವ ತಪ | ಒಡಲ ದಂಡಿಸುತಿರ್ಪನು || ಮೃಡನು ಸದ್ಭಕ್ತಗೆ | ಕೊಡದೆ ಇಷ್ಟಾರ್ಥವ | ಜಡ ಪಿಡಿದಿರ್ಪುದೇನು || ೨ || ನೋಡು ಕಣ್ತೆರೆದು ನೀ ಕೊಡದೆ ಇಷ್ಟಾರ್ಥವ | ಜಡ ಪಿಡಿದಿರ್ಪುದೇನು || ೨ || ನೋಡು ಕಣ್ತೆರೆದು ನೀ ಮಾಡು ಕೃಪೆಯನಿತ್ತು | ಬೇಡಿದ ವರಗಳನು | ಮೋಡಿಯಿಂದಿರಲೊಡ | ಗೂಡಿ ನಿನ್ನೊಡನೆ ಜೂ | ಜಾಡುವಳಲ್ಲ ನಾನು || ೩ || ಪುರಹರನೆಂದನು | ಅರಸಿ ಯೋಗದಲಿ ಮೈ ಮರೆದಿದ್ದ ಕಾರಣದಿ || ಅರಿಯದೆ ಪೋದೆನು ಹೊರತೆನ್ನ ಶರಣರ | ಮರೆಯುವೆನೆ ಮಡದಿ || ೪ || ನಡೆ ಬೇಗ ಭಕ್ತಗೆ | ಕೊಡುವರೆ ಕಾಮಿತ | ತಡವೇತಕೆಂದೆನುತ || ಮಡದಿಯನೊಡಗೊಂಡು | ಮೃಡನು ಬಂದಾ ದೈತ್ಯ | ನೊಡನೆಂದ ನಸುನಗುತ || ೫ ||

ಸುರುಟಿ : ಏಕ

ಮೆಚ್ಚಿದೆ ನಾನಿದಕೆ | ಪೇಳೀ | ನಿಶ್ಚಲ ತಪವೇಕೆ || ನೆಚ್ಚಿನ ಭಕ್ತ ನಿ | ನ್ನಿಚ್ಛೆಯದೇನಂ |

Generated by CamScanner from intsig.com

ದುಚ್ಚರಿ ಸೈನಾ | ನಿಶ್ಚಯ ಕೊಡುವೆನು || ೧ || ನಿನ್ನ ತೆರದಿ ಕಠಿಣ | ತಪಗೈ | ದನ್ಯರಿಲ್ಲ ಮುನ್ನ || ಇನ್ನಿದಕೊಲಿದು ಪ್ರ | ಸನ್ನನಾಗಿಹೆನು | ಇನ್ಯಾತಕೆ ತಪ | ವನ್ನೀಕ್ಷಣ ಬಿಡು || ೨ || ಎಂದ ಮಾತ ಕೇಳಿ | ಭಕ್ತಿಯೊ | ಳಂಧಕ ಮುದ ತಾಳಿ || ವಂದಿಸಿ ಚರಣಕೆ | ಕಂದುಗೊರಳ ದಯ | ದಿಂದ ಕೇಳು ನೀ | ನಿಂದು ಬಿನ್ನಹಗಳ || ೩ || ದೇವತೆಗಳ ಗೆಲುವ | ವರವನು | ಈವುದೆನಗೆ ದೇವ || ಕಾವುದೆನ್ನನೆಂ | ದುಸುರೆ ದನುಜ ಉ | ಮಾವರನೆಂದನು ಸಾವಧಾನ ದೊಳು || ೪ ||

ಆರಭಿ : ತ್ರಿವುಡೆ

ಮಗನೆ ಲಾಲಿಸು ದೇವತೆಗಳೊಳು | ಹಗೆತನವ ಸ್ವಪ್ನದೊಳಗಾದರು | ಬಗೆಯಬಾರದು ನಿನ್ನ ಬಯಕೆಯು | ಸೊಗವಿದಲ್ಲ || ೧ || ಬೇರೆ ಬಯಕೆಯದೇನು ಮಘವನ | ಮೀರಿಸುವ ಸಂಪದವನಾದರು | ಭೋರನೀವೆನು ಕೇಳೆನುತ ತ್ರಿಪು | ರಾರಿ ನುಡಿದ || ೨ || ಬೇರೆ ಬಯಕೆಗಳಿಲ್ಲೆನಗೆ ಗೌ |ರೀರಮಣ ದೇವತೆಗಳೆಲ್ಲರ | ಗಾರುಗೆಡಿಸುವ ಮನ ಹೊರತು ಕೃಪೆ | ದೋರಿ ದೇವ || ೩ || ಸಲಿಸು ಬಯಕೆಯನಲ್ಲದಿರೆ ನಿ | ಷ್ಫಲವಗೊಳ್ಳಲಿ ಗೈದ ತಪವಿದ | ನುಳಿದು ಬೇಡುವನಲ್ಲವೆಂದನು | ಛಲದಿ ದನುಜ || ೪ ||

ಭೀಂಪಲಾಸ್ : ರೂಪಕ

ಕೃತ್ತಿವಾಸಗೆ ಮಣಿಯುತ್ತಲಂದಗಜಾತೆ | ಭಕ್ತವತ್ಸಲನು ನೀ ದೇವ || ದೈತ್ಯನು ತನು ದಂಡಿಸುತ್ತಲೆ ಬಹುಕಾಲ | ಚಿತ್ತಶುದ್ಧಿಯೊಳ್ ಗೈದ ತಪವ || ೧ || ನುಡಿದರಿಷ್ಟಾರ್ಥವ ಕೊಡದಿರೆ ಲೋಕದೊ | ಳಡಗದೆ ಭಕ್ತವತ್ಸಲನು || ಮೃಡನೆಂಬ ಬಿರುದನ್ನು ತಡವೇಕೆ ಶರಣಗೆ | ಕೊಡು ಬೇಗ ಮನದಿರವನ್ನು || ೨ || ಅರಸಿ ಕೇಳೀತಗಿತ್ತರೆ ಬೇಡಿದುದ ಮುಂದೆ | ಹರಿಹರಾದ್ಯರನು ಲೆಕ್ಕಿಸದೆ || ನೆರೆ ಮತ್ತನಾಗಿ ತಾ ಧರೆಗೆ ಕಂಟಕನಾಗ | ದಿರನದರಿಂದ ಇಂತೊರೆದೆ || ೩ || ನಿನ್ನ ನುಳಿದು ಸರ್ವರನ್ನು ಜೈಸುವ ವರ | ವನ್ನಿತ್ತು ಸಲಹು ಶರಣನ || ಪನ್ನಗಾಭರಣನೆ ಸಮ್ಮತವಲ್ಲೀತ | ನನ್ನುಪೇಕ್ಷಿಪುದೆನ್ನ ರಮಣ || ೪ || ಎಂದ ಮಾತನು ಕೇಳಿ ಅಂಧಕನಿಂಗೊಲಿ | ದೆಂದನಾ ಕ್ಷಣ ಚಂದ್ರಮೌಳಿ || ಕಂದ ನೀ ಗೆಲಿದೆಲ್ಲ ವೃಂದಾರಕರ ಕೀರ್ತಿ | ಹೊಂದಿ ಬಾಳಿನ್ನು ಲೋಕದಲಿ || ೫ || ಧೃಡವಿದು ಧರ್ಮವ ಕೆಡಿಸಿದೆಯಾದರೆ | ನುಡಿಯು ನಿಶ್ಚಯ ಕೇಳೆನ್ನಿಂದ || ಮಡಿವೆ ಎಂದ ಭಯವ ಕೊಡುತಲೆ ಸತಿಸಹ | ಮೃಡನಂತರ್ಧಾನವ ತಳೆದ || ೬ ||

ಸೌರಾಷ್ಟ್ರ : ತ್ರಿವುಡೆ

ಅಂತಕಾಂತಕನಿಂದ ವರಗಳ | ನಿಂತು ಸಾಧಿಸುತಂಧಕಾಸುರ | ಸಂತಸದಿ ಪುರಕೈತರಲು ನಿ | ಶ್ಚಿಂತೆಯಿಂದ || ೧ || ತಿಳಿದಿದನು ದಾನವರು ಸಂಭ್ರಮ | ಗಳಲಿದಿರ್ಗೊಳೆ ಮುಂದೆ ಸತಿಯರು |

Generated by CamScanner from intsig.com

ಬೆಳಗಿದರೆ ರತ್ನಾರತಿಯ ಕೈ | ಗೊಳುತಲದನು || ೨ ||

ವಾರ್ಧಿಕ

ದೈತ್ಯರೆಲ್ಲರು ಬಿಡದೆ ನಿತ್ಯಕರ್ಮಂಗಳನು | ಇತ್ತು ದಾನಗಳ ಸತ್ಪಾತ್ರದಲಿ ದಿನದಿನದಿ | ಕೃತ್ತಿವಾಸನ ಪೂಜಿಸುತ್ತ ವೇದಾಧ್ಯಯನ ಪಂಚಯಜ್ಞಗಳ ನಡೆಸಿ || ಸತ್ವದಿಂದಿರೆ ನಾಕದತ್ತ ಕಳುಹಿದ ತನ್ನ | ಗುಪ್ತಚಾರರು ಸುರರ ಕೃತ್ರಿಮವನರಿಯುವಡೆ | ಪೃಥ್ವಿ ಮೂರರೊಳತಿ ಸಮರ್ಥನೆಂದೆನಿಸಿರ್ದನಿತ್ತಲಂಧಕನು ಮುದದಿ || ೧ |

ಕಂದ

ಅಂಧಕನೋಲಗದೊಳಿರಲ್ | ಕ್ಕೊಂದಿನ ನಡೆತಂದು ಗೂಢಚಾರಕರಾಗಂ || ವಂದಿಸುತಲೆ ದೈತ್ಯಾಗ್ರಣಿ | ಗೆಂದರು ಸುಮನಸರ ಯೋಚನೆಗಳ ಭರದಿಂ || ೧ ||

ಮುಖಾರಿ : ಏಕ

ಚಿತ್ತಾವಧಾನ ಪರಾಕು ಜೀಯ | ನಾವೆಂಬ ಸುರರ | ಗುಪ್ತಾಲೋಚನೆಯ ದಾನವರೆರೆಯ || ವ್ಯಕ್ತಾಣತಿಯನು ನಾಕಕೈದಿರೆ ಸ | ಮರ್ಥನಾಗಿ ನೀ ಮರೆಯುತಲಿರುತಿಹ | ವಾರ್ತೆಯರಿತು ನೆರೆಮತ್ಸರಿಸುತ್ತಲೆ | ವೃತ್ರಹರನು ಕೂಡುತ್ತಲೆ ಸುರರ || ೧ || ಧೀಷಣಾದ್ಯರನೊಡಗೊಂಡವನು | ಅಂಧಕ ನಮ್ಮ | ದ್ವೇಷಿಗ ಪ್ರಬಲನಾಗಿಹನಿನ್ನು || ಘಾಸಿಗೊಳಿಸದಿರನ್ಯೆತಂದೆಮ್ಮನು | ಜೈ ಸಲರಿದು ಹರನಿತ್ತಿಹ ವರದಲಿ | ನಾಶಗೊಳಿಸಬೇಕಂತಾದರೆನುತ | ವಾಸವಮುಖ್ಯರು ಯೋಚಿಸುತಿಹರು || ೨ ||

ಭೈರವಿ : ಅಷ್ಟ

ಎಂದ ಮಾತನು ಕೇಳುತ್ತ | ರೋಷವ ತಳೆ | ದಂಧಕ ಗರ್ಜಿಸುತ್ತ || ವೃಂದಾರಕರೆನ್ನ ಕೊಂದು ಕಳೆಯುವದ | ಕಿಂದು ಯೋಚಿಸುತಿಹರೆ || ೧ || ಕೃತ್ರಿಮಗೈವವರ | ಬಡಿದು ಕೆಡ | ಹುತ್ತೆಲ್ಲ ಸುಮನಸರ || ತೊತ್ತಿಗೆಲ್ಲರ ನೇಮಿಸುತ ನಿಲಿಸುವೆ ಕಾರ | ಸ್ಥಾನವೆಂತಿನ್ನವರ || ಮಣಿರಥವೇರಿದನು | ಶಸ್ತ್ರಾಸ್ತ್ರಗಳನು ಧರಿಸುತ್ತವನು || ಘನವಾದ ಮೇರು ಪರ್ವತವನುತ್ತರಿಸುತ್ತ | ದನುಜೇಶ ನೈ ತಂದನು || ೩ ||

ಸೌರಾಷ್ಟ್ರ : ತ್ರಿವುಡೆ

ಇತ್ತ ನಾಕಾಧಿಪನರಿತು ನೆರ | ಹುತ್ತ ಸುಮನಸರನ್ನು ಪೇಳಿದ | ಕೃತ್ತಿವಾಸನು ಅಂಧಕಾಸುರ | ಗಿತ್ತ ವರವ || ೧ || ಆದಿತೇಯರ ಜೈಸೆನುತ್ತಲಿ ಕಾದಿ ಗೆಲಲರಿದಿನ್ನು ದೈತ್ಯನ | ಬಾಧೆ ತಪ್ಪದು ಖಳನ

Generated by CamScanner from intsig.com

ವಧಿಸುವ | ಹಾದಿಗಾಣೆ || ೨ || ಪಥವದಾವುದೆನುತ್ತಲಾ ಸುರ | ಪತಿಯು ಕಳವಳಿಸುತ್ತಲಾ ಗೀ | ಷ್ಪತಿಯೊಡನೆ ಯೋಚಿಸುತಲಿರ್ದನು | ವ್ಯಥೆಯೊಳಂದು || ೩ || ಬಂದನಾಕ್ಷಣ ಸಭೆಗೆ ಗರ್ಜಿಸು | ತಂಧಕಾಸುರ ಕಾಣುತಲೆ ಸುರ | ವೃಂದ ನಡ ನಡುಗುತ್ತ ಭಯದಲಿ | ವಂದಿಸಿದರೆ || ೪ || ಅಧಮ ಸಾಕೀ ವಿನಯ ಎನ್ನ | ಭ್ಯುದಯ ಕುರೆ ಮತ್ಸರಿಸಿ ಮರುಳನೆ | ವಧಿಸೆ ಮಂತ್ರಾಲೋಚನೆಯ ಗೈ | ದುದನು ತೋರು || ೫ || ಬಂದಿಹೆನು ನಾ ನಿನ್ನೆಡೆಗೆ ನೋ | ಡಿಂದು ನಿಮ್ಮ ಧಟನು ಪರೀಕ್ಷಿಸ | ಲೆಂದು ಕರೆ ಪೊರೆವವರನೆಂದನು | ಅಂಧಕಾಖ್ಯ || ೬ ||

ಕೇದಾರಗೌಳ : ಅಷ್ಟ

ತರಹರಿಸುತ ಪಾದಕ್ಕೆರಗುತಂಧಕಗೆಂದ | ಪುರುಹೂತ ವಿನಯದಲಿ || ಹರಿಯೊಳು ವೈರವ ಕುರಿಯು ಸಾಧಿಸುತ ಬಾ | ಳಿರುವುದೆ ಲೋಕದಲಿ || ೧ || ವೈರವೆ ಸಂಗರಧೀರ ನಿನ್ನೊಡನೆ ವೃಂ | ದಾರಕರಲಿ ಕೃಪೆಯ || ಬೀರಿ ಸಿಂಹಾಸನವೇರಿ ರಕ್ಷಿಪುದೆಮ್ಮ | ತೋರುತ್ತೆಲ್ಲರಿಗಭಯ || ೨ || ಎಂದು ಬಿನ್ನೈಸಿದಡಂಧಕಾಸುರ ನಾಗ | ಇಂದ್ರಾಸನವೇರಿದ || ಬಂದೆಲ್ಲ ತ್ರಿದಶರು ವಂದಿಸುತಿರೆ ಮುದ | ದಿಂದ ದೈತ್ಯನು ಮೆರೆದ || ೩ || ಸುರಪನೊಳಂಧಕನೊರೆದನು ನಾಕದೊಳಿರುವ ಸಂಪದಗಳನು || ಭರದೊಳು ತೋರು ನಿನ್ನರಸಿಯನೊಡಗೊಂಡು | ಪರಿಕಿಪೆನೆಲ್ಲವನು || ೪ ||

ಸಾಂಗತ್ಯ : ರೂಪಕ

ಎಂದ ಮಾತನು ಕೇಳು | ತಿಂದ್ರನು ನೆರೆಭೀತಿ | ಹೊಂದಿ ಚಿಂತಿಸುತೆಂದ ಹರಿಯೆ || ಮಂದಮತಿಯು ಶಚಿ | ಯೊಂದಿಗೆ ತೋರಬೇ | ಕೆಂದುದರರ್ಥವನರಿಯೆ || ೧ || ಕೆಡುವ ಕಾಲವೆಮಗೆ | ಧಡಿಗನಾಜ್ಞೆಯನು ನಾ | ನಡೆಸದಿರಲು ಬಾಳಗೊಡನು || ಮೃಡನೆ ನೀ ಗತಿಯೆಂದು | ಧೃಡಮನದಲಿ ತನ್ನ | ಮಡದಿಯನೊಡಗೂಡುತವನು || ೨ ||ಸುರಧೇನುವನು ಕಲ್ಪ | ತರು ಉಚ್ಚೈಶ್ರವಸುವ ಮರೆಯುತಿರ್ಪೈರಾವತವನು || ವರ ಚಿಂತಾಮಣಿ ಸಹ ದುರುಳಗೆ ತೋರುತ | ಲ್ಲಿರುವ ಸಂಪದಗಳೆಲ್ಲವನು ||೩|| ಕರೆತಂದು ನಾಟ್ಯ ಮಂ | ದಿರಕೆ ಪೀಠದಲಿ ಕು | ಳ್ಳಿರಿಸುತಪ್ಸರೆಯರ ಬರಿಸಿ || ತರಳಾಕ್ಷಿಯರ ನೃತ್ಯ | ಪರಿಕಿಸುತೆಮ್ಮನು | ಪೊರೆಯಬೇಕೆಂದನು ನಮಿಸಿ || ೪ || ಇಂದ್ರಾಣಿ ಸಹಿತ ಮ | ಹೇಂದ್ರನು ಕುಳಿತಿರ | ಲೊಂದೆಡೆಯಲಿ ಮಾನಿನಿಯರು || ಕಂದರ್ಪ ನಲಗುಗ | ಳಂದದಿ ಮೆರೆಯುತ್ತೈ | ತಂದು ನಾಟ್ಯಕೆ ತೊಡಗಿದರು || ೫ ||

ಕಂದ

ಆ ಸಭೆಯಲಿ ದಿನಕರ ಸಂ | ಕಾಶದಿ ರಂಜಿಪ ಪುಲೋಮಜೆಯ ಕಂಡಾಂಗಂ | ಪೂಸರಳನಹತಿಯಿಂ ದೈ | ತ್ಯೇಶನು ಬಸವಳಿಯುತಲೆಂದ ನಿಜಮನದೊಳಗಂ || ೧ ||

Generated by CamScanner from intsig.com

ದೇಶಿ : ಅಷ್ಟ

ಅರರೆ ಏನಂಬೆ ಸೋಜಿಗವ | ಕಾಣೆ | ಧರೆ ಮೂರರೊಳಗೀ ಸೌಂದರ್ಯದಿ ಮೆರೆವ || ತರುಣಿ ಶಚಿಯು ದಿವ್ಯ ರೂಪ | ಕಂಡು | ಮರುಳಾದೆ ಶರವನೆಸೆಯಲಿಕ್ಷುಚಾಪ || ೧ || ನಾಗವೇಣಿಯನೊಡಗೂಡಿ | ಸುಖ | ಭೋಗವ ಪಡೆಯದಿರ್ಪಾತನು ಹೇಡಿ || ಮೇಘನಾಥನಿಗೇತಕಿವಳು | ಎನ್ನ | ಭಾಗ್ಯದೊಳೀಪರಿ ಗೋಚರಿಸಿದಳು || ೨ || ನಾಕದ ಸಂಪದವೆಲ್ಲ | ವರ | ರಾಕಾಶಶಾಂಕವದನೆಗೆಣೆಯಲ್ಲ || ಕೋಕಿಲವಾಣಿಯ ಬಿಡೆನು | ಎನು | ತಾ ಖಳನೆತ್ತಿ ಕೊಂಡ್ಯೊದ ಶಚಿಯನು || ೩ || ಮರುಗಿ ಗೋಳಿಟ್ಟಳಾ ಕಾಂತೆ | ಕರೆ | ಕರೆದು ಸುರರ ಮೊರೆಯಿಡ್ಡ ಗುಣವಂತೆ || ಗರುಡನು ಫಣಿಯನ್ಯೊವಂತೆ | ಕಡು | ದುರುಳನ್ಯೊದನು ಕಡೆಗಾಲವೆಂಬಂತೆ || ೪ ||

ಭೈರವಿ : ಏಕ

ಕಂಡಾಕ್ಷಣ ಸುರರೆರೆಯ | ಖತಿ | ಗೊಂಡು ನೆರಹಿ ಸುರತತಿಯ | ಕೆಂಡವನುಗುಳಿ ನಯನದಿ | ಭಂಡನ ತಡೆದನು | ಭರದಿ || ೧ || ನಿಲ್ಲಂಧಕ ಕಡು ದುರುಳ | ನೀ | ನೆಲ್ಲಿಗೊಯ್ಯುವೆ | ನಾರಿಯಳ || ಮಲ್ಲತನಕೆಸಲ್ಲ | ರಣದಲ್ಲಿ ತೋರುವದಧಟೆಲ್ಲ || ೨ || ದೈತ್ಯರೇಳಿಗೆಯನು ಕಂಡು | ಕಡು | ಧೂರ್ತನೆ ಮತ್ಸರಗೊಂಡು | ಗುಪ್ತಸಭೆಯಗೈದಂತ | ನಿನ | ಗಿತ್ತೆನು ಪ್ರಾಯಶ್ಚಿತ್ತ || ೩ || ನ್ಯಾಯಾನ್ಯಾಯ ವಿಚಾರ | ದೈ | ತ್ಯೇಯರು ತಿಳಿಯದೆ ಸುರರ || ನೋಯಿಸುವರು ಘನ ಮದದಿ | ನೆರೆ | ದಾಯಾದ್ಯರೆನುವ ನೆವನದಿ || ೪ || ನ್ಯಾಯದಿಪಡೆದವ ನೀನು | ಬಿಡು | ಬಾಯೊಳಾಡಿ ಫಲವೇನು || ಕಾಯುವ ಹರಿ ನಡೆತರಲು | ಬಿಡೆ | ತೋಯಜಮುಖಿಯನಿಂದಿನೊಳು || ೫ || ಕೆಡುವ ಕಾಲದ ನೀತಿ | ನುಡಿ | ವಡೆ ಹಿತವಾಗದ ರೀತಿ || ಮಡಿಯುವ ಕಾಲವು ಬಂತು | ಅದ | ಕಡಸಿತು ನಿನಗೀ ಭ್ರಾಂತು || ೬ || ಸುರಸಂಪದಗಳಿವೆಲ್ಲ | ಸು | ಸ್ಥಿರವೆಂಬ ಮದದಿ ನೀ ಖೂಳ || ಮೆರೆಯುವಧಟನೀಕ್ಷಿಪೆನು || ಎಂ | ದಿರದೆಚ್ಚನು ಶರಗಳನು || ೭ ||

ಭಾಮಿನಿ

ದಾನವನ ಕೂರಲಗ ಹತಿಯು | ಸ್ನಾನಲಾರದೆ ಭೀತಿಯಲಿ ಗೀ | ರ್ವಾಣರೆಲ್ಲರು ಕಳವಳಿಸುತೋಡಿದರು ದೆಸೆದೆಸೆಗೆ || ಆನೆಗಳ ಸಂಕುಲವನಾ ಪಂ | ಚಾನನನು ಹೊಗುವಂತೆ ಚಾನಾ | ಹಾನಿ ಗೈದಾ ಸುರರ ಶಚಿಯನ್ಯೊದ ನಿಜಪುರಕೆ || ೧ ||

ಸಾಂಗತ್ಯ : ರೂಪಕ

ಅಂಧಕಾಸುರನಿಂತು | ಮಂದಮತಿಯೊಳ್ಯೊದ | ಇಂದ್ರಾಣಿಯನು ಪುರದೆಡೆಗೆ || ವೃಂದಾರಕಾಧಿಪ | ನಂದು ಶೋಕಿಸುತೆಂದ | ಮುಂದಾವ ದಾರಿಯು ನಮಗೆ || ೧ || ಬೇರೆ ಯತ್ನವ

Generated by CamScanner from intsig.com

ಕಾಣೆ | ದೂರಲು ನಾವ್ಯೈದಿ | ಸಾರಸಾಸನನೊಳು ಮಣಿದು || ಶಾರದಾ ವರದಯ | ದೋರುವನೆನುತ | ವೃಂದಾರಕರೊಡನಾತ ಬಂದು || ೨ || ಸತ್ಯಲೋಕದಿ ಮುರು | ಗುತ್ತಲೆ ಚರಣಕ್ಕೆ | ಭಕ್ತಿಯಿಂದೆರಗಿದಾತನನು | ಎತ್ತಿ ಮನ್ನಿಸಿ ಶತ | ಪತ್ರಕುವರನೆಂದಾ | ಪತ್ತೇನು ಪೇಳು ಚಿಂತೆಯನು || ೩ ||

ಕಾಂಬೋದಿ : ಅಷ್ಟ

ತಾಮರಸಾಸನ ದೇವ | ಹೇ ಪಿ | ತಾಮಹ ಕೇಳು ಬಿನ್ನಪವ || ವ್ಯೋಮಕೇಶನ ವರಬಲದೊಳಂಧಕನೆಂಬ | ಕಾಮುಕ ದಾನವನೇರಿದ ನಾಕವ || ೧ || ಸತ್ಕರಿಸಲು ಭೀತಿಯಿಂದ | ಕಡು | ಧೂರ್ತನು ಮದವೇರಿ ನುಡಿದ || ಪತ್ನಿ ಸಹಿತ ಸಂಪತ್ತ ತೋರೆನೆ ಬೇರೆ | ಯತ್ನ ಕಾಣದೆ ತೋರೆ ಧೂರ್ತ ಕಾಮುಕನಾಗಿ || ೨ || ಮಾನಿನಿಮಣಿ ಪುಲೋಮಜೆಯ | ನ್ಯೊಯ್ಯೆ | ಚೂಣಿಗೊದಗಿದೆಮ್ಮ ಜೀಯ | ಚಾನಾಹಾನಿಯಗೈವುತ್ಯೊದನು | ತರುಣಿಯ | ಮಾನ ಪ್ರಾಣಗಳ ಕಾಯ್ದೆಮ್ಮ ಸಲಹು ಜೀಯ || ೩ ||

ಕಾಂಬೋದಿ : ಝಂಪೆ

ಎಂದ ಮೊರೆ ಕೇಳುತರ | ವಿಂದಸುಕುಮಾರನಿಂ | ತೆಂದ ಸಂತೈಸುತ್ತ | ಲಂದು ಸುಮನಸರ || ಅಂಧಕಾಸುರನ ದೆಸೆ | ಯಿಂದ ಬಳಲಿದಿರಿ ನೀ | ವಿಂದೇನು ಫಲವು ಎ | ನ್ನಿಂದಸಾಧ್ಯವಿದು || ೧ || ಗಾರುಗೆಡಲೇಕೆಂದು | ಶಾರದಾವರನಂದು | ಸೇರಿ ತ್ರಿದಶರ ಬಂದು ಕ್ಷೀರಸಾಗರದಿ || ಭೂರಿ ಭಕ್ತಿಯ ತಳೆದು | ನಾರಾಯಣನ ಚರಣ | ಸಾರಸವ ನುತಿಸೆ ಮ್ಯೆ | ದೋರಿದನು ಭರದಿ || ೨ || ಕರುಣಸಾಗರನಭಯ | ಕರವದೋರುತ ನುಡಿದ | ಪರಮೇಷ್ಠಿ ಸುರರನೀ ಪರಿ ಕೂಡಿ ನೀನು || ಶರಧಿಯೆಡೆಗೈತಂದು | ಮೊರೆಯನಿಡುವರೆ ಕುಂದುಕೊರತೆ ಏನಾಯ್ತು ಪೇ| ಳರಿತುಕೊಂಡಪೆನು || ೩ ||

ಮಧ್ಯಮಾವತಿ : ಏಕ

ಮಾಧವಾಚ್ಯುತ ಮಧುಸೂದನ ದೇವ | ಹೇ ದಯನಿಧಿ ನಿನ್ನ ಪಾದ ಪಂಕಜವ || ಆರಾಧಿಸಿ ಧನ್ಯರಾದೆವಾವಿಂದು | ಮೋದದಿ ಪೊರೆ ದೈತ್ಯ ಬಾಧೆಯ ನರಿದು || ೧ || ಅಂಧಕನೆನುವ ಮದಾಂಧ ದಾನವನು | ಬಂದು ಗೆಲಿದು ಸುರವೃಂದವ ಖಳನು || ಇಂದ್ರಾಣಿಯನು ಛಲದಿಂದ್ಯೊದನವನ | ಕೊಂದು ರಕ್ಷಿಸು ನಮ್ಮ ಇಂದಿರಾರಮಣ || ೨ ||

ಕಂದ

ಪದಕೆರಗುತಲೀ ತೆರದಿಂ | ತ್ರಿದಶರು ಮೊರೆಯಿಡಲು ತೋರುತಭಯುವನಾಗಂ ||

Generated by CamScanner from intsig.com

ಬೆದರದಿರೆಲ್ಲರೆನುತ್ತಂ | ಪದುಮಾಕ್ಷಂ ನುಡಿದನಾಗ ನಸುನಗೆಯಿಂದಂ || ೧ ||

ಮೋಹನ : ತ್ರಿವುಡೆ

ಏಳಿರೇಳಿರಿ ಮನದಿ ಧೈರ್ಯವ | ತಾಳಿ ಬ್ರಹ್ಮಾದಿಗಳು ಬಾಧಿಪ | ಖೂಳನನು ಶೀಘ್ರದಲಿ ಸಮರದಿ | ಸೋಲಿಸುವೆನು || ೧ || ಹರನ ವರವನು ಪಡೆದು ಧರ್ಮಾ | ಚರಣೆಯೊಳಿರದೆ ಬಯಸುವರು ಪರ | ತರುಣಿಯರನು ವಿನಾಶ ಕಾಲಕೆ | ಬರುವ ಬುದ್ಧಿ || ೨ || ದಾನವನ ವಶವಾಗಿ ಮರುಗುವ | ಮಾನಿನೀ ಮಣಿ ಶಚಿಯ ಸಲಹುವೆ | ಮಾನಪ್ರಾಣವ ಸಹಿತಲೆಂದನು | ಶ್ರೀನಿವಾಸ || ೩ ||

ಕಂದ

ಇತ್ತ ಭಯವ ಕಳುಹಲು ಪುರು | ಷೋತ್ತಮನಡಿಗೆರಗಿ ನಾಕಕೈದಿದ ರಾಗಂ || ವೃತ್ರಹರಾದ್ಯರು ವರ ಶತ | ಪತ್ರೋದ್ಭವ ತೆರಳೆ ಸತ್ಯಲೋಕಕೆ ಮುದದಿಂ || ೧ ||

ಕೇದಾರಗೌಳ : ಅಷ್ಟ

ಇತ್ತ ಶೋಣಿತದಲ್ಲಿ | ಧೂರ್ತನಂಧಕ ತರಿ | ಸುತ್ತ ಜಗದೊಳಿರುವ || ಮತ್ತಕಾಶಿನಿಯರ | ನಿತ್ಯ ಭೋಗಿಸಿ ಕೆಡಿ | ಸುತ್ತಲಿರ್ದನು ಧರ್ಮವ || ೧ || ಹೊಂದದೆ ತೃಪ್ತಿಯ | ಇಂದ್ರನ ಮಡದಿಯ | ನಿಂದು ಮನವನೊಲಿಸಿ || ಸುಂದರಾಂಗಿಯ ಸುಖ | ಹೊಂದುವೆ ವಿಧವಿಧ | ದಿಂದಾಕೆಯಲಿ ಭೋಗಿಸಿ || ೨ || ಎಂದು ನಿಶ್ಚಯಿಸಿ ಮ | ದಾಂಧನು ಬಹುಪರಿ | ಯಿಂದ ಶೃಂಗಾರವಾಗಿ || ಬಂಧನದಲಿ ಶೋಕ | ದಿಂದಿಹ ಶಚಿಯೊಡ | ನೆಂದನು ಬಳಿಗೆ ಹೋಗಿ || ೩ ||

ಕಾಂಬೋದಿ : ರೂಪಕ

ಚಂದವೇನಿದು ಮನದಿ ನೊಂದುಕೊಂಬುದು | ಚಂದವೇನಿದು || ಪಲ್ಲ || ಮಂದಯಾನೆ ಸುಂದರಿ ಪೂ |ರ್ಣೇಂದುವದನೆ ನೊಂದು ಕಂಗ | ಳಿಂದ ಸಲಿಲಬಿಂದು ಸುರಿಸಿ | ಅಂದಗೆಡಿಸೆ ಚಂದವೇನೆ || ೧ || ಹರಿಣನೇತ್ರೆ ನಿನ್ನ ಚೆಲುವ | ಪರಿಕಿಸಿದಂದೆಚ್ಚು ಶರವ | ಸ್ಮರನು ವಿಧವಿಧದಲಿ ಕೆಡಿಸಿ | ತರುಣಿ ತಂದೆ ನಿನ್ನೊಳ್ ರಮಿಸೆ || ೨ || ಹೇಡಿ ಎನಿಸಿಕೊಂಡ ಮಘವ | ಕೂಡಿ ಪಡೆವದೆಂತು ಸುಖವ | ಮಾಡು ಮನವ ಹರುಷಗೊಳಿಸೆ | ಕೂಡುತೆನ್ನ ಸುಖದಿ ರಮಿಸೆ || ೩ ||.

ಸಾಂಗತ್ಯ : ರೂಪಕ

ಖಳನೆಂದ ವಚನ ಕೂ| ರಲಗಿನಂತಾಗಲು | ಕಳವಳಿಸುತ ಶಚಿ ಮನದಿ || ತಳೆದಾಪತ್ತಿಲಿ ಧೈರ್ಯ | ನಳಿನಲೋಚನೆ ನುಡಿ | ದಳು ನೀತಿವಚನವ ಭರದಿ || ೧ || ದನುಜೇಶ ಬಿನ್ನಹ | ವನು ಲಾಲಿಸು ತಿಳಿಯದಾ | ತನು ನೀನೇನಲ್ಲ ಧರ್ಮವನು | ಮನದಿ ಯೋಚಿಸು ಪರ | ವನಿತೆಯರಭಿಲಾಷೆ

Generated by CamScanner from intsig.com

| ಘನತೆಯ ಕೆಡಿಸುವದಿನ್ನು || ೨ || ಭಕ್ತಿಯಿಂದೊಲಿಸಿದೆ | ಮೃತ್ಯುಂಜಯನ ಘನ | ಶಕ್ತಿಯಿಂದಮರರ ಗೆಲಿದೆ || ಕೀರ್ತಿಯ ತಳೆದೆ ಸಂ| ಪತ್ತಿಲಿ ಮೆರೆದನ್ಯ | ಪತ್ನಿಯ ನಿಟ್ಟಿಸಬಹುದೆ || ೩ || ಪತಿಪಾದ ಸೇವೆ ಸ | ಸದ್ಗತಿಗೆ ಸಾಧನವೈಸೆ | ಪತ್ನಿಯಾದವಳಿಗೆ ಲೋಕದಲಿ || ಶ್ರುತಿವಾಕ್ಯವನ್ಯ ವ| ನಿತೆಗೆಣೆ ಧರ್ಮಾ | ನ್ವಿತ ಪುರುಷನಿಗೆ ನಿತ್ಯದಲಿ || ೪ || ಮನದೊಳಿಚ್ಛಿಸದೆನ್ನ | ಅನುಜೆಯೆಂದರಿತು ನೀ | ಇನಿಯನ ಬಳಿಗೆ ಕಳುಹಿಸಿ || ತ್ರಿಣಯನೊಲುಮೆಯಿಂದ | ಜನಪದದಲಿ ಬಾಳು | ಘನತರ ಕೀರ್ತಿಯ ಗಳಿಸಿ || ೫ ||

ಮೋಹನ : ಅಷ್ಟ

ಯಾಕಿದನೊರವೆ ಜಾಣೆ | ಯೋಚಿಸದೆ ವಿ| ವೇಕದಿ ನೀ ಸುಮ್ಮನೆ || ಲೋಕೇಶ ಪಡೆದ ಮಗಳನು ವರಿಸಿಹ ಪಿ | ನಾಕಿ ಕೂಡಿದ ಹರಿಯ | ಮೋಹಿನಿಯ || ೧ || ಯೋಗಿ ಜನರು ಸಹಿತ | ಮಾರನ ಶರ | ತಾಗಲು ಭ್ರಮೆಗೊಳುತ | ನೀಗಿ ತಮ್ಮಯ ತಪ ನಾಗವೇಣಿಯರನು | ಭೋಗಿಸಿಹರು ನಿರತ | ಯೋಚಿಸು ಮತ್ತ || ೨ || ಸುರನರೋರಗ ಲೋಕದ | ಸುಂದರಿಯರು | ಸ್ಮರಿಸುತಿಹರು ಸರ್ವದಾ || ಚರಣ ದರ್ಶನವೀಯದಿರುವ ನಾ ನಿನಗಿಂತು | ಮರುಳಾದೆ ಕೃಪೆ ಮಾಡೆಂದು | ಕರವ ಮುಗಿದ || ೩ || ಒಡನತಿ ಖಾತಿಯಲಿ | ಪುಲೋಮಜೆ ನುಡಿದಳು ದೈತ್ಯನಲಿ || ಸುಡು ನಿನ್ನ ಬಾಳ್ವೆಯ ಧಡಿಗ ಖಳನೆ ನೀತಿ | ನುಡಿದೇನು ಫಲ ನಿನ್ನಲಿ | ಪೋಗೆನೆ ಕೇಳಿ || ೪ ||

ವಾರ್ಧಿಕ

ವಾರಿಜಾಕ್ಷಿಯ ನುಡಿಗೆ ಘೋರ ದಾನವನು ಮದ | ವೇರಿ ನುಡಿದನು ವಿನಯದೋರಿ ಪೇಳಿದರೆ ಧಿ | ಕ್ಕಾರ ಗೈಯ್ಯುವೆ ಬಲತ್ಕಾರದಿಂ ಕೂಡಿದರೆ ಯಾರು ಕೇಳುವರೆನ್ನುತ || ಸಾರಿದನು ಸನಿಹಕಾ ನಾರಿ ಮೊರೆಯಿಡಲು ದೈ | ತ್ಯಾರಿ ಸಲಹೆಂದು ನೀರಜಾಕ್ಷನು ತಿಳಿದು | ಘೋರ ಶಿಖಿಶರವ ತೆಚ್ಚೇರಿ ಬಿಡೆ ಮಂತ್ರಿಸುತ ಆರುಭಟಿಸುತಲಿ ಬಂದು || ೧ ||

ಮಾರವಿ : ಏಕ

ಉರಿಗೆದರುತಲೈತರುತಿರೆ ಪಾವಕ | ಶರವದನೀಕ್ಷಿಸುತ | ಬೆರಗಾಗುತ ಖಳ ವರುಣ ಶರದೊಳದ | ಪರಿಹರಿಸಿದನಾತ || ೧ || ಯಾರೆನ್ನಯ ಪುರ ಸೇರುತ ವಿಕ್ರಮ | ದೋರಲು ಶರ ಬಿಡುತ || ವೀರನವನ ಯಮನೂರ ಪೊಗಿಸದಿರೆ | ನಾರಾಚದೊಳೆನುತ || ೨ || ಬಂದನರಸುತೊಡನಂಧಕ ಕಂಡು ಮು | ಕುಂದನ ಕೇಳಿದನು || ಮಂದಮತಿಯೆ ಮದದಿಂದೆನ್ನಯ ಪುರ | ಕಿಂದು ಪೊಕ್ಕುದೇನು || ೩ || ಅರಿಯದೆನ್ನ ಸಂಗರವಿಕ್ರಮ ಶಿಖಿ | ಶರವನೆಚ್ಚೆಯಲ್ಲ || ಅರುಹು ಕಾರಣವ ಹರಿ ತಂದುದು ಯಮ | ಪುರವ ಪೊಗುವ ಕಾಲ || ೪ ||

Generated by CamScanner from intsig.com

ಬಿಲಹರಿ : ಅಷ್ಟ

ಕೇಳಂಧಕಾಸುರ ನುಡಿಯ | ಫಣಿ | ಮಾಲನ ಭಕ್ತ ದಾನವಕುಲವರ್ಯ|| ಶೂಲಿಸನ್ನಿಭನು ವಿಕ್ರಮದಿ ನಿನ್ನ | ಪೋಲುವ ಭಟರಿಲ್ಲ ನೋಡೆ ತ್ರಿಜಗದಿ || ೧ || ಅರಿತಲ್ಲ ನೀತಿ ಶಾಸ್ತ್ರಗಳ | ಸ್ಮರ | ಶರಕೆ ಸಿಲುಕಿ ಪರವನಿತೆಯಾದವಳ || ತರುವುದು ನೀತಿಯೆ ಶಚಿಯ | ಇದ | ನರಿತು ನಾನಾಂತೆನು ನಿನ್ನಲಿ ಹಗೆಯ || ೨ || ಶಿಕ್ಷೆ ರಕ್ಷೆಗೆ ಕರ್ತನಹೆನು | ನಿಟಿ | ಲಾಕ್ಷನ ಸಖನೆಂಬುದನ್ನರಿತಿನ್ನು | ಈಕ್ಷಣ ಶಚಿಯನೊಪ್ಪಿಸಲು | ಸಹ | ಸ್ರಾಕ್ಷಗೆ ನಿನ್ನ ಪಾಲಿಪೆನು ಮೋದದೊಳು || ೩ ||

ಭೈರವಿ : ಅಷ್ಟ

ಗಳಹದಿರ್ರೈ ಸುಮ್ಮನೆ ಕೇಶವನೆ ನಾ | ತಿಳಿದಿಹೆ ನಿನ್ನ ಬಗೆ || ಬಲು ಕಪಟಿಗನು ದೈತ್ಯಾನ್ವಯವನೆಲ್ಲ | ಕೊಲಿಸಿದ ನಮ್ಮ ಹಗೆ || ೧ || ತ್ರಿದಶರ ಪಕ್ಷದವ | ಕೆಡಿಸಿ ವಿಧು | ವದನೆ ವೃಂದೆಯ ಧರ್ಮವ || ಒದರುವೆ ನೀತಿಯ ವಧಿಸಿ ನಿನ್ನನು ತೀರಿ | ಸದೆ ಬಿಡೆ ಹಗೆತನವ || ೨ || ಅನುವಾಗು ಬೇಗದೊಳು | ವಿಕ್ರಮವಿರೆ | ಅನುವರವಿಂದೆನ್ನೊಳು || ಎನಲದನಾಲಿಸಿ ರಣಕೆ ನಿಂದನು ವರ ವನಜಾಕ್ಷ ದೈತ್ಯನೊಳು || ೩ || ಕಣೆಗಳ ಸಮರದಲಿ ಕಾಣದೆ ಜಯ | ವನು ಮನದಲಿ ಕನಲಿ || ಅನುವಾದರಿಬ್ಬರು ಜಟ್ಟಿ ಕಾಳಗಕೆಂದು | ವನಜಾಕ್ಷ ರೋಷದಲಿ || ೪ || ಮೆಟ್ಟಿದಾಕ್ಷಣ ಪದದಿ | ದೈತ್ಯನೆಸೆಯ | ಲ್ಪಟ್ಟಾಗ ಬಹುದೂರದಿ || ಸೃಷ್ಟಿಗೆ ಬಿದ್ದು ಮೂರ್ಛಿತನಾದ ಖಳರು ಕಂ| ಗೆಟ್ಟೋಡಿದರು ಭರದಿ || ೫ ||

ಸಾಂಗತ್ಯ : ರೂಪಕ

ಅರಸ ಧರ್ಮಜ ಕೇಳು | ಹರಿಯು ಬಳಿಕ ಕಾವ | ಲಿರುವ ಭಟರ ದೆಸೆಗೆಡಿಸಿ | ಭರದೊಳು ಪೊಗಲಂತಃ | ಪುರವ ನೀಕ್ಷಿಸುತ ಲಾ | ತರುಣಿಮಣಿಯು ಶಚಿ ನಮಿಸಿ || ೧ || ಇಳುಹಿ ಕಂಬನಿಗಳ | ಬಲು ಭಕ್ತಿಯಲಿ ನುತಿ | ಸಲುತೋರುತಭಯವನಂದು | ಖಳನ ವಧಿಸಲು ನಿ | ಟಲನೇತ್ರನಲ್ಲದಿ | ಲ್ಲಿಳೆಯೊಳೆಂಬುದನು ನಾ ತಿಳಿದು || ೨ || ಗರುಡನ ಮೇಲೆ ಕು | ಳ್ಳಿರಿಸುತ್ತ ಶಚಿಯನು | ಬರುತಿರೆ ಕೈಲಾಸದೆಡೆಗೆ | ಪರಿಕಿಸಿ ಹರಿಯನು | ಪರಮ ಸಂತಸದಿ ಶಂ| ಕರ ವಂದಿಸುತಲೆಂದನವಗೆ || ೩ || ಕ್ಷೇಮವೆ ಭಾವಯ್ಯ | ಶ್ರೀಮನೋಹರದೇವ | ಈ ಮುಹೂರ್ತದಿ ಬಂದುದೇನು || ತಾಮರಸಾಕ್ಷಿ ಪು | ಲೋಮಜೆ ಸಹಿತನೆ | ವ್ಯೋಮಕೇಶನೊಳು ಪೇಳಿದನು || ೪ || ಮೊರೆಯಿಟ್ಟಮರರು | ದುರುಳನಂಧಕ ನಿನ್ನ | ವರಬಲದಿಂದೆಲ್ಲ ಸುರರ || ಧುರದೊಳು ಸೋಲಿಸಿ | ತರುಣಿ ಶಚಿಯ ನಪಹರಿಸಿದನಿಂದು ಕೇಳ್ದದರ || ೫ || ಕೊಳಗುಳದಲಿ ಮೂರ್ಛೆ| ಗೊಳಿಸಿ ದೈತ್ಯನ ತಂದೆ | ಲಲನೆಯ ಹರನೆ ನಿನ್ನೆಡಗೆ || ಅಳಿವು ನಿನ್ನಿಂದಲಾ | ಖಳಗೆಂದರಿತಿವಳ | ಸಲಹುವ ಭಾರವು ನಿನಗೆ || ೬ ||

Generated by CamScanner from intsig.com

ವಾರ್ಧಿಕ

ಹರನೊಳೀ ಪರಿ ನುಡಿದು ತರುಣಿಯನ್ನೊಪ್ಪಿಸುತ | ತೆರಳಿದ ರಮಾವರಂ ಗರುಡವಾಹನನಾಗಿ | ಪುರಹರನೆ ಸಲಹೆಂದು ಚರಣಕೆರಗಿದ ಸುರಪನರಸಿಗಭಯವ ನೀಯುತ || ಗಿರಿಜಾರಮಣನಿರಲು ಮೆರೆವ ಕೈಲಾಸದಲಿ | ಧುರದಿ ಮೂರ್ಛೆಯ ತಳೆದ ದುರಳನಂಧಕನು ಚೇ | ತರಿಸುತೆದ್ದಾ ಕ್ಷಣವೆ ಅರಸಿ ಕಾಣದೆ ಶಚಿಯ ಹರಿಯೊಯ್ದನೆಂಬುದರಿತು || ೧ ||

ಸೌರಾಷ್ಟ್ರ : ತ್ರಿವುಡೆ

ಘುಡುಘುಡಿಸುತೊಡನೆಂದ ನಂಧಕ | ಕಡಲೊಳಡಗಿಹನಿಂದು ಸುರಪನ | ಮಡದಿಯನ್ನೊಯ್ದಿರ್ಪ ದುರುಳನ | ಬಿಡೆನು ಹರಿಯ || ೧ || ಲೆಕ್ಕಿಸೆನು ಮಾಯಗಳನಾತನ | ಶಿಕ್ಷಿಸುತ ನಾ ತಾರದಿರೆ ಕಮ | ಲಾಕ್ಷಿಯಳನೆಂದೆನುತ ಪೊರಟನು | ಆ ಕ್ಷಣದಲಿ || ೨ ಧರಿಸಿ ಶಸ್ತ್ರಾಸ್ತ್ರಗಳನಂಧಕ | ಬರುತಿರಲು ಪಥದೊಳಗೆ ಬಂದನು | ಹರನ ನಾಮವ ಕೀರ್ತಿಸುತ್ತಲೆ | ಸುರಮುನೀಂದ್ರ || ೧ ||

ಕೇದಾರಗೌಳ : ಅಷ್ಟ

ಬಂದ ನಾರದನ ಕಂ | ಡಂಧಕ ಚರಣಕ್ಕೆ | ವಂದಿಸೆ ಭಕ್ತಿಯಲಿ || ಎಂದನಾತನೊಳು ದೈ | ತ್ಯೇಂದ್ರ ನೀನೀಪರಿ | ಯಿಂದ ಬಂದಿಹುದೇಕಿಲ್ಲಿ || ೧ || ತಿಳುಹು ಬೇಗನೆ ಮುನಿ | ತಿಲಕನೆ ಸುರಪನ | ಲಲನೆ ಪುಲೋಮಜೆಯ || ತಿಳಿಯದಂದದೊಳ್ಕೊದ | ಖಳ ವೈರಿಯರಸು | ತ್ತಲೆ ಬಂದೆನಾ ಹರಿಯ || ೨ || ಬಗೆಯದಾತನ ಕ | ರಗಳನು ಬಂಧಿಸುತಲೆ | ಹಗರಣದಿಂದ್ಯೊವೆನು|| ಮೃಗವಿಲೋಚನೆಯ ನಾ | ಸೊಗಸಿನಿಂ ವರಿಸುವ | ಬಗೆಯ ನೀನೊರೆವುದಿನ್ನು || ಅರಿತೆ ನಿನ್ನಯ ಮನ | ದಿರವ ಸೆಣಸಿ ವ್ಯರ್ಥ | ಹರಿಯೊಳು ಬಳಲಲೇಕೆ || ಪರಮ ಮಾಯಾವಿಯಾ | ಗಿರುವ ರಮಾಧವ | ತರಳೆಯ ಕಾಯ್ವುದಕೆ || ೪ || ತನಗಸದಳವೆಂದು | ನಿನ್ನಯ ಶಚಿಯನು ತ್ರಿಣಯನ ವಶಕಿತ್ತನು || ಸೆಣಸಿ ಶಂಕರನೊಳು | ವನಿತೆಯ ವಶ ಮಾಡೆಂ | ದನು ಮುನಿ ನಾರದನು || ೫ ||

ಮಾರವಿ : ಏಕ

ಲೇಸಾದುದೆನುತ ನಾರದನನಾ ದೈ | ತ್ಯೇಶನು ಬೀಳ್ಕೊಂಡ || ಈಶನ ಪರಿಕಿಪೆನೆನುತಲೆ ಶಚಿಯಭಿ | ಲಾಷೆಯೊಳೈತಂದ || ೧ || ಬಂದಾಕ್ಷಣ ತನ್ನೆಡೆಗೆ ಬರಿಸುವೆನು | ಚಂದ್ರಧರನೆನುತ | ನಿಂದನು ಕೈಲಾಸದ ಮೂಲ ದಿಕರ | ದಿಂದದನಲುಗಿಸುತ || ೨ || ಈ ಪರಿಯಲುಗಿಸೆ ಗಿರಿಯನು ನೆರೆ ಉ | ಲ್ಕಾಪಾತಗಳಾಗೆ || ಆ ಪರ್ವತ ಮರವದುರಲು ಕಂ | ಡಾ ಪರಮೇಶ್ವರಿ ಶಿವಗೆ || ೩ || ಹರಣದೆರೆಯ ನೀ ಗಿರಿಯಲ್ಲಾಡುವ | ಪರಿಯದೇನು ಪೇಳು || ಧರಣಿಯು ಕಂಪಿಸುತಿರುವ ಕಾರಣವದ | ನರಿಯೆ ನಾನಿಂದಿನೊಳು || ೪ || ಎಂದಡೊರೆದ ಗಿರಿನಂದನೆ ಲಾಲಿಸು | ಅಂಧಕ ಮಮ ಭಕ್ತ ||

Generated by CamScanner from intsig.com

ಇಂದ್ರಾಣಿಯ ತಾ ಹೊಂದುವ ಬಯಕೆಯೊ | ಳ್ಬಂದಿಹನವನಿತ್ತ || ೫ || ಬಲು ತಪದಾ ಫಲವಳಿಸಿ ಕೊಂಡ ಪರ ಲಲನೆಯರನು ಬಯಸಿ || ಅಳಿವ ಕಾಲವಿದು ಕೊಲುವೆನವನ ನಾ | ಸಲಹೆ ಶಚಿಯನರಸಿ || ೬ || ನಡೆತಂದಾಕ್ಷಣ ಬಿಡುಗಣ್ಣರು ಮಣಿ | ದೊಡೆನೆಂದರು ದೇವ | ಧಡಿಗನ ಶಿರವನು ತರಿದು ರಕ್ಷಿಸೆ | ಮ್ಮೊಡೆಯನೆ ಸಾಂಬಶಿವ || ೭ ||

ಭಾಮಿನಿ

ತ್ರಿದಶರಿಂಗಿತ್ತಭಯವನು ಪೇ | ಳಿದನಸಾಮಾನ್ಯನವನಂಧಕ | ವಧಿಸಲಾತನ ನಿಮ್ಮ ಶಕ್ತಿಗಳಿಂದ ನವರಥವ || ನೊದಗಿಸಲು ನಾನೇರಿ ಪೋಪೆನು ಮದಮುಖನ ಸಂಹರಿಸಲೆನಲವ | ರೊದಗಿನಿಂದ ನಿರ್ಮಿಸಲು ರಥವೇರಿದನು ತ್ರಿಪುರಾರಿ || ೧ ||

ಸೌರಾಷ್ಟ್ರ : ತ್ರಿವುಡೆ

ಅಡರಿ ರಥವನು ಬಂದು ದಾನವ | ನೊಡನೆ ಪೇಳಿದ ಗಿರಿಯನಲುಗಿಪ | ಕಡುಹುತನವನು ತೋರು ನೀನೆ | ನ್ನೊಡನೆ ರಣದಿ || ೧ || ಎಂದುದನು ಲಾಲಿಸುತ ಪೇಳಿದ | ಅಂಧಕಾಸುರ ದೇವ ಕದನಕೆ | ಬಂದೆಯಾ ಭಕ್ತನಲಿ ಲೇಸಾ | ಯ್ತಿಂದುಧರನೆ || ೨ || ಭಕ್ತ ನೀನಾಗಿರ್ದು ಸುರಪನ | ಪತ್ನಿಯಲಿ ಮನಮಾಳ್ಪುದುಚಿತವೆ | ಧೂರ್ತ ನೀನದರಿಂದ ಶಿಕ್ಷೆಗೆ | ಪಾತ್ರನಹುದು || ೩ || ಮತ್ಸರಿಗಳಾಗಿಹರು ತ್ರಿದಶರು | ಶತ್ರುಗಳೆನಗೆನ್ನ ವಧಿಸಲು | ಗುಪ್ತದಲಿ ಯೋಚಿಸುತಲಿರ್ದರು | ಕೃತ್ತಿವಾಸ || ೪ || ದಾನವರು ಬಯಸುತಲಿ ಸ್ವರ್ಗವ | ಸೇನೆಗಳ ಕೂಡುತ್ತ ಸುರರೊಳು | ಚೂಣಿಗದು ಕಾರಣವೆನಿಸಿ ತೀ | ಕ್ಷೋಣಿಯೊಳಗೆ || ೫ || ಏನಿದೇನನ್ಯಾಯ ಹಿರಿಯರು | ದಾನವರಿರಲು ನಾಕವನು ಗೀ | ರ್ವಾಣರಾಳಲು ಬಿಡುವನಲ್ಲವು | ಸ್ಥಾಣು ಕೇಳು || ೬ || ಸಾತ್ವಿಕರು ಸುಮನಸರೆನುತ ತ್ರೈ | ಮೂರ್ತಿಗಳು ತ್ರಿದಶರಿಗೆ ನಾಕವೆ | ನುತ್ತಲಿತ್ತೆವು ತಾಮಸಿಗಳೈ | ದೈತ್ಯರೆಲ್ಲ || ೭ || ಕೃತ್ತಿವಾಸನೆ ಸುರರ ಪಕ್ಷದಿ | ವ್ಯರ್ಥಬಂದರೆ ಬಗೆಯ ನಿನ್ನನೆ | ನುತ್ತ ಮಂತ್ರಾಸ್ತ್ರಗಳ ನೆಚ್ಚನು | ಧೂರ್ತ ದನುಜ || ೮ || ತರಿದು ಖಳನಸ್ತ್ರಗಳ ಶಂಕರ | ನುರಿಮಸಗಿ ಭುಜಗಾಸ್ತ್ರವೆಸೆಯಲು | ಗರುಡ ಬಾಣದಿ ತರಿದು ಬಿಸುಟನು | ದುರುಳನದನು || ೯ ||

ಭಾಮಿನಿ

ವಿವಿಧ ಮಂತ್ರಾಸ್ತ್ರಗಳನೆಚ್ಚರು | ಬವರದಲಿ ಜಯ ಕಾಣದಾಕ್ಷಣ | ಭವನು ಯೋಚಿಸಿ ದ್ವಂದ್ವ ಯುದ್ಧಕ್ಕೆ ಕರೆಯಲಂಧಕನ || ಜವದೊಳೊದಗುತ ಮಲ್ಲಯುದ್ಧದಿ | ಶಿವನ ಕಂಕುಳೊಳೌಕಿ ಮರ್ದಿಸೆ | ಬವಣೆಗೊಳ್ಳು ತಲಭವ ಮೂರ್ಛಿತನಾಗೆ ಕಳವಳಿಸಿ || ೧ ||

Generated by CamScanner from intsig.com

ಸಾಂಗತ್ಯ : ರೂಪಕ

ಹರಹರಾ ಶಂಕರ ಮರುಳುತನದಲಿ ದೇ | ವರದೇವನೊಡನೆನಾ ಕಾದಿ || ಧರೆಗೆ ಕೆಡಹಿದೆನೆ | ವರವಿತ್ತು ಮೊದಲೆನ್ನ | ಪೊರೆದ ದೈವವನಿಂದು ಮದದಿ || ೧ || ವೆತ್ತ ಪಾಪಕೆ ಪ್ರಾಯ | ಶ್ಚಿತ್ತ ಕಾಣೆನು ದಿವ್ಯ | ಮೂರ್ತಿಯ ಸಂತೈಸೆ ಮನದಿ || ಯತ್ನದೋರದೆನುತ್ತ | ಹೊತ್ತು ತಂದು ಮಲಗಿ | ಸುತ್ತ ಚಿಂತಾಮಣಿ ಗೃಹದಿ || ೨ || ತೆರಳಿದನದ ಕಂಡು | ಗಿರಿಜಾತೆ ಮರುಗುತ್ತ | ಪರಿಪರಿಯಿಂದುಪಚರಿಸಿ || ನೆರೆ ಚೇತನಗೊಳಿಸೆ || ಹರನೆದ್ದ ಕಂಗಳೊಳುರಿಯ ಕಿಡಿಯ ಹೊರಸೂಸಿ || ೩ ||

ವಾರ್ಧಿಕ

ಘುಡುಘುಡಿಸಿ ಶಂಕರಂ ಮಡುಹುವೆನು ಖಳನ ನೆಂ | ದೊಡನೆಕಾಶ್ವರ ಶರವ ಪಿಡಿದು ದಾನವನೆಡೆಗೆ | ಹೊಡೆಯಲ್ಕೆ ನಾಂಟಿಗಳ ಪೊಡವಿಗುರುಳಿದನಾಗ ಮೃಡನು ಶೂಲದಿ ತಿವಿಯಲು || ಒಡನೆ ಸುಜ್ಞಾನವಂ ಪಡೆದಂಧಕಾಸುರಂ | ನಡನಡುಗಿ ಭಯದಿ ಪಿಡಿಯುತಭವ ಪಾದವಂ | ಒಡೆಯ ರಕ್ಷಿಪುದೆಂದು ಅಡಿಗೆರಗಿ ನುತಿಸಲಾ ಮೃಡನು ಕರುಣದೊಳೆಂದನು || ೧ ||

ಮೋಹನ : ಅಷ್ಟ

ಅಳದಿರಂಧಕ ಭಕ್ತ | ಗೊಲಿದು ನಿನ್ನಯ ತಪ್ಪು | ಗಳನ್ನೆಲ್ಲ ಕ್ಷಮಿಸಿದೆನು || ತಿಳುಹು ಮನದಿ ನೀನು | ತಳೆದಿಹ ಬಯಕೆಯನು | ಸಲಿಸುವೆನೆನಲೆಂದನು || ೧ || ಬೇರೆ ಬೇಡೆನಗೆ ಪು |ರಾರಿ ದೇವರದೇವ | ಗೌರಿವರನೆ ಲಾಲಿಸು || ಕಾರುಣ್ಯದಿಂತ ವ |ಸಾರೂಪ್ಯಪದವಿತ್ತು |ಮಾರಸಂಹರ ರಕ್ಷಿಸು || ೨ || ಭಕ್ತನ ನುಡಿಗೂಲಿ | ಯುತ್ತೆಂದ ಶಂಕರ | ನಿತ್ತೆ ಮನದಿರವ ನಾನು || ನಿತ್ಯ ಭೃಂಗೀಶನೆಂಬುತ್ತಮ ಪೆಸರೊಳೆ | ನ್ನೊತ್ತಿನೊಳಿಹುದು ನೀನು || ೩ ||

ಭಾಮಿನಿ

ಇಂತಭಯವನ್ನಿತ್ತು ಭಕ್ತಗೆ | ಅಂತಕಾಂತಕನವನ ತನುವ ಮ | ಹಾಂತಶೂಲದಿ ಸೀಳಿ ಕೆಡಹುತಲಾ ತ್ರಿಶೂಲವನು || ಕಂತುಹರ ಪಾತಾಳಕೊತ್ತಿದ | ನಿಂತು ಭೃಗು ಪರ್ವತದ ಶಿಖರದಿ | ಸಂತಸದಿ ಪಾತಾಳಗಂಗೆಯಲದ್ದಿ ತೆಗೆಯಲಿಕೆ || ೧ ||

ಕಂದ

ಶೂಲದ ರಂಧ್ರದೊಳಾ ಪಾ | ತಾಳದ ವರಗಂಗೆ ಧಾರಿಣಿಗೆ ಬಂದಾಗಂ|| ಶೂಲೋದ್ಭವ ತೀರ್ಥವೆನಿಸಿ | ಭೂಲೋಕದ ಜನರ ದುರಿತವ ಹರಿಸಿ ಮೆರೆದಳ್ ಬಳಿಕಂ || ೧ ||

Generated by CamScanner from intsig.com